**ಪ್ರಧಾನ ಜಿಲ್ಲಾ ಮತ್ತು ಸತ್ರ/ವಿಶೇಷ ನ್ಯಾಯಾಧೀಶರ ನ್ಯಾಯಾಲಯ , ಉಡುಪಿ ಜಿಲ್ಲೆ ಉಡುಪಿ**

**ಸ್ಪೆಷಲ್ ಕೇಸ್ ನಂಃ 58/2021 ಪಿ.ಡಬ್ಲ್ಯುಃ 2**

**ಸಿ.ಡಬ್ಲ್ಯುಃ 4**

| | |
|---|---|
| ಸಾಕ್ಷಿದಾರರ ಹೆಸರು | ಜಗದೀಶ್ |
| ತಂದೆಯ ಹೆಸರು | ಶೇಖರ |
| ವಯಸ್ಸು | 38 ವರ್ಷ |
| ಉದ್ಯೋಗ | ಎಸ್.ಡಿ.ಎ, ಕಾಪು ಪುರಸಭೆ |
| ವಿಳಾಸ | ಕಾಪು |

ದಿನಾಂಕಃ 28-11-2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು

**ಮುಖ್ಯ ವಿಚಾರಣೆಃ ವಿಶೇಷ ಸಾರ್ವಜನಿಕ ಅಭಿಯೋಜಕರಿಂದ**

1) ತಾರೀಕು 16.03.2019 ನನ್ನ ಮುಖ್ಯಾಧಿಕಾರಿಗಳು ನನಗೆ ಮತ್ತು ಚಾ.ಸಾ.5 ಇವರಿಗೆ ಸೂಚನೆ ಕೊಟ್ಟು, ಉಡುಪಿಯ ಎ.ಸಿ.ಬಿ ಕಚೇರಿಗೆ ಹೋಗಿ ವರದಿ ಮಾಡಿಕೊಳ್ಳುವಂತೆ ಸೂಚಿಸಿದ್ದರು, ಅದರಂತೆ ನಾನು 10 ಗಂಟೆಗೆ ಎ.ಸಿ.ಬಿ ಕಚೇರಿಯಲ್ಲಿ ವರದಿ ಮಾಡಿಕೊಂಡಿದ್ದೆವು. ಅಲ್ಲಿ ಚಾ.ಸಾ. 20 ಇವರು ಇದ್ದರು. ಆಗ ಅಲ್ಲಿ ಚಾ.ಸಾ.1 ಮತ್ತು ಇತರ ಪೊಲೀಸ್ ಸಿಬ್ಬಂದಿಗಳು ಇದ್ದರು. ಚಾ.ಸಾ.20 ಇವರು ನಮಗೆ ಚಾ.ಸಾ.1 ಕೊಟ್ಟಿದ್ದ ದೂರಿನ ಬಗ್ಗೆ ಮಾಹಿತಿ ಕೊಟ್ಟಿದ್ದರು. ಅದರಂತೆ ಬೆಂಗಳೂರಿನಲ್ಲಿ ಚಾ.ಸಾ.1 ಇವರಿಗೆ ಸೇರಿದ ಕಾರು ಬೆಂಕಿಗೆ ಆಹುತಿ ಆಗಿತ್ತು ಎಂದು ಹೇಳಿದ್ದರು. ಸದ್ರಿ ಕಾರನ್ನು ರೋಡ್ ಟ್ಯಾಕ್ಸ ನ ಮರುಪಾವತಿಗಾಗಿ ಆರ್. ಟಿ. ಒ. ಕಚೇರಿಯಲ್ಲಿ ಹೋದಾಗ ಅವರಿಗೆ ಬರಬೇಕಾದ ಹಣದ ಶೇಕಡ 10 ರಷ್ಟ ಹಣವನ್ನು ಲಂಚವಾಗಿ ಕೇಳಿದ್ದರು ಎಂದು ಹೇಳಿದ್ದರು. ಆ ಹಣವನ್ನು ಕೊಡಲು ಒಪ್ಪದೇ ಚಾ.ಸಾ.1 ದೂರು ಕೊಟ್ಟಿದ್ದರು ಎಂದು ಹೇಳಿದ್ದರು. ಆ ಹಣವನ್ನು 1 ನೇ ಆರೋಪಿ ಕೇಳಿದ್ದರು ಎಂದು ಹೇಳಿದ್ದರು. ಅದಕ್ಕಾಗಿ ಪಂಚನಾಮೆ ಮಾಡಬೇಕೆಂದು ಚಾ.ಸಾ.1 ನಮಗೆ ಹೇಳಿದ್ದರು.

2)ಆಗ ಚಾ.ಸಾ.1 ತಂದಿದ್ದ ಡಿ.ವಿ.ಡಿ.ಯನ್ನು ಚಾ.ಸಾ. 1 ಇವರ ಲ್ಯಾಪ್ ಟಾಪ್ ನಲ್ಲಿ ಹಾಕಿ ಕೇಳಿಸಿದ್ದರು. ಅದರಲ್ಲಿ ಚಾ.ಸಾ.1 ಮತ್ತು 1 ನೇ ಆರೋಪಿತನ ನಡುವೆ

ಸಂಭಾಷಣೆ ಎಂದು ಹೇಳಿದ್ದರು. ಅದರಲ್ಲಿ ಲಂಚದ ಬೇಡಿಕೆ ಇತ್ತು ಮತ್ತು ಅದರಲ್ಲಿದ್ದ ಚಾ.ಸಾ.1 ರವರ ಧ್ವನಿಯನ್ನು ಗುರುತಿಸಿದ್ದೆ. ಸದ್ರಿ ಸಿ.ಡಿ.ಯನ್ನು ಒಂದು ಪ್ಲಾಸ್ಟಿಕ್ ಕವರಿನಲ್ಲಿ ಹಾಕಿ ಸೀಲ್ ಮಾಡಿದ್ದರು. ಸದ್ರಿ ಸಿ.ಡಿ.ಯನ್ನು ನೋಡಿ ಗುರತಿಸಬಲ್ಲೆ. ಈಗಾಗಲೇ ಅದು ಎಮ್. ಒ. 1 ಆಗಿದೆ.

3) ಆರೋಪಿಗೆ ಕೊಡಬೇಕಾಗಿದ್ದ ಲಂಚದ ಹಣವನ್ನು ಚಾ.ಸಾ. 1 ಹಾಜರುಪಡಿಸಿದ 4,000 ರೂಪಾಯಿಗಳ ಹಣ, ಎರಡು ಸಾವಿರ ರೂಪಾಯಿಗಳ ಎರಡು ನೋಟಗಳನ್ನು ಚಾ.ಸಾ.1 ಇವರು ತೆಗೆದುಕೊಂಡಿದ್ದರು. ಚಾ.ಸಾ.20 ಅವುಗಳ ನಂಬರಗಳನ್ನು ಬರೆದುಕೊಳ್ಳಲು ಚಾ.ಸಾ.5 ಇವರಿಗೆ ಹೇಳಿದ್ದರು. ನಾನು ಆ ನೋಟುಗಳ ನಂಬರಗಳನ್ನು ಹೇಳಿದ್ದೆ. ಸದ್ರಿ ವಿವರಗಳನ್ನು ಈಗ ನೋಡಿ ಅದನ್ನು ನಿ.ಪಿ.7 ಎಂದು, ಅದರಲ್ಲಿಯ ನನ್ನ ಸಹಿಯನ್ನು 7(ಎ) ಎಂದು ಗುರುತಿಸಿದ್ದೇನೆ. ನಂತರ ಪೊಲೀಸ್ ಸಿಬ್ಬಂದಿಯವರು ಆ ನೋಟುಗಳಿಗೆ ಫೆನಾಪ್ತಲಿನ್ ಪುಡಿಯನ್ನು ಲೇಪಿಸಿದ್ದರು. ಇನ್ನೊಬ್ಬ ಸಿಬ್ಬಂದಿ ಪ್ಲಾಸ್ಟಿಕ್ ಗ್ಲಾಸಿನಲ್ಲಿ ಸೋಡಿಯಂ ಕಾರ್ಬೋನೇಟ್ ಪೌಡರ್ ಹಾಕಿ ನೀರಿನೊಂದಿಗೆ ಬೆರೆಸಿ ಧ್ರಾವಣ ಮಾಡಿದ್ದರು. ಅದಕ್ಕೆ ಬಣ್ಣವಿರಲಿಲ್ಲ. ಅದರಿಂದ ಮಾದರಿಯನ್ನು ತೆಗೆದು ಒಂದು ಬಾಟಲಿಯಲ್ಲಿ ಅದಕ್ಕೆ 'ವಿ' ಸೀಲ್‌ನ್ನು ಮಾಡಿದ್ದರು. ಅದಕ್ಕೆ ಅಂಟಿಸಿದ ಲೇಬಲ್‌ಗೆ ನಾನು ಸಹಿ ಮಾಡಿದ್ದೆ . ಈಗ ಅದನ್ನು ನೋಡಿ ಗುರುತಿಸಿದ್ದೇನೆ. ಅದು ಎಮ್ ಒ 2 ಆಗಿದೆ.

4)ಚಾ.ಸಾ.20 ಇವರು ನನಗೆ ಆ ನೋಟುಗಳನ್ನು ಎಣಿಕೆ ಮಾಡಿ ಟೇಬಲ್ ನಲ್ಲಿ ಇಡಲು ಹೇಳಿದ್ದರು.ನಾನು ಹಾಗೆ ಇಟ್ಟ ನಂತರ ನನ್ನ ಎರಡು ಕೈ ಬೆರಳುಗಳನ್ನು ಎಂದು ಬಟ್ಟಲಿನಲ್ಲಿ ಇರಿಸಿದ್ದರು. ಆಗ ಧ್ರಾವಣದ ಬಣ್ಣ ತೆಳು ಗುಲಾಬಿ ಬಣ್ಣಕ್ಕೆ ತಿರುಗಿತು. ಅದನ್ನು ಪ್ರತ್ಯೇಕ ಬಾಟಲಿಗೆ ಹಾಕಿ ತೆಗೆದಿದ್ದರು. ಅದಕ್ಕಾಗಿ ಸೀಲು ಮಾಡಿ ಚೀಟಿ ಅಂಟಿಸಿ ನನ್ನ ಸಹಿ ಪಡೆದಿದ್ದರು. ಆಗ ನನ್ನೊಂದಿಗೆ ಇದ್ದ ಚಾ.ಸಾ.1, 5 ಮತ್ತು 20 ಸಹ ಸಹಿ ಮಾಡಿದ್ದರು. ಆ ಎಮ್.ಒ.ಸೀಸೆಗಳನ್ನು ಚಾ.ಸಾ.20 ತೆಗೆದು ಇಟ್ಟುಕೊಂಡಿದ್ದರು. ನಂತರ ನಾವು ಸೋಪಿನಿಂದ ಕೈ ತೊಳೆದುಕೊಂಡಿದ್ದೇವು. ಈ ಪ್ರಕ್ರಿಯೆ ನಡೆಯುತ್ತಿದ್ದಾಗ ಪೊಲೀಸರು ಪೋಟೊ ಮತ್ತು ವಿಡಿಯೋ ಮಾಡುತ್ತಿದ್ದರು ಮತ್ತು ಪಂಚನಾಮೆಯನ್ನು ಸಹ ಬರೆದುಕೊಳ್ಳುತ್ತಿದ್ದರು. ಆನಂತರ ಚಾ.ಸಾ.1 ಈತನ ಅಂಗಶೋಧನೆ ಮಾಡಿದ್ದರು. ಆಗ ಬರೆದ ಮಹಜರನ್ನು ನನಗೆ ತಗೆದುಕೊಟ್ಟಿದ್ದರು.

ನಾನು ಅದನ್ನು ಓದಿ ಸಹಿ ಮಾಡಿದ್ದೆ. ಆಗ ನನ್ನೊಂದಿಗಿದ್ದ ಚಾ.ಸಾ.1, 5 ಮತ್ತು ತನಿಖಾಧಿಕಾರಿಯು ಸಹ ಸಹಿ ಮಾಡಿದ್ದರು. ಸದ್ರಿ ಪಂಚನಾಮೆಯ ನಿ.ಪಿ 2 ಆಗಿದ್ದು ಅದರಲ್ಲಿಯ ನನ್ನ ಸಹಿಯು ನಿ.ಪಿ 2(ಬಿ) ಮತ್ತು ಚಾ.ಸಾ. 5 ಇವರ ಸಹಿ ನಿ.ಪಿ .2(ಸಿ) ಆಗಿದೆ. ಆ ಸಮಯದಲ್ಲಿ ತೆಗೆದ ಫೋಟೋಗಳನ್ನು ನೋಡಿ ಗುರುತಿಸಿದ್ದೇನೆ ಈಗಾಗಲೇ ನಿ.ಪಿ 5 ಎಂದು 32 ಫೋಟೋಗಳನ್ನು ಗುರುತಿಸಲಾಗಿದೆ.

5) ನಂತರ, ನಾನು ಚಾ.ಸಾ.5 ,ಫಿರ್ಯಾದಿದಾರರು, ಚಾ.ಸಾ.20 ಮತ್ತು ಅವರ ಸಿಬ್ಬಂದಿಗಳೊಂದಿಗೆ ಠಾಣೆಯಿಂದ ಹೊರಟು ಆರೋಪಿತರ ಕಚೇರಿಗೆ ಹೋಗಿದ್ದೇವು. ನಾವು ಹೋಗುವ ಮೊದಲು ಚಾ.ಸಾ.20 ರವರು ಚಾ.ಸಾ.1 ಇವರಿಗೆ ಕೊಟ್ಟ ಸೂಚನೆಗಳನ್ನು ಪಾಲಿಸಲು ಹೇಳಿದ್ದರು. ನಾನು ಮತ್ತು ಚಾ.ಸಾ.1 ಒಟ್ಟಿಗೆ ಆರೋಪಿತರ ಕಚೇರಿಗೆ ಹೋಗಬೇಕೆಂದು, ಆ ಸಮಯದಲ್ಲಿ ಚಾ.ಸಾ.1 ಮಾತುಗಳನ್ನು ದಾಖಲಿಸಿಕೊಳ್ಳಬೇಕೆಂದು ಒಂದು ವೈಸ್ ರೆಕಾರ್ಡರ ಕೊಟ್ಟಿದ್ದರು. ಆರೋಪಿ ಲಂಚ ಕೇಳಿದಾಗ ಅದನ್ನು ಕೊಡಬೇಕೆಂದು ಚಾ.ಸಾ.1 ಇವರಿಗೆ ಹೇಳಿದ್ದರು. ನನಗೆ ಚಾ.ಸಾ.1 ಇವರೊಂದಿಗಿದ್ದು ಅಲ್ಲಿ ಆಗುತ್ತಿರುವುದನ್ನು ನೋಡಿಕೊಂಡು ನಂತರ ತಿಳಿಸಬೇಕೆಂದು ಹೇಳಿದ್ದರು. ನಾವು ಆರೋಪಿಯ ಕಚೇರಿಯ ಬಳಿ ಹೋದಾಗ ಮಧ್ಯಾಹ್ನದ ಸಮಯ. ನಾನು ಚಾ.ಸಾ.1 ಈತನೊಂದಿಗೆ 1 ನೇ ಆರೋಪಿಯ ಕೋಣೆಗೆ ಹೋದಾಗ ಸಿಬ್ಬಂದಿಗಳು ಕಚೇರಿಯಲ್ಲಿಯೇ ಇದ್ದರು. ಚಾ.ಸಾ.5 1 ನೇ ಫ್ಲೋರ್ ನಲ್ಲಿದ್ದರು. ನಾವು ಹೋದಾಗ ಆರೋಪಿ ಇದ್ದರು. ನಾವು ವೈಸ್ ರೆಕಾರ್ಡರ್ ಆನ್ ಮಾಡಿಕೊಂಡು ಹೋಗಿದ್ದೇವು. ಚಾ.ಸಾ.1 ಹೋಗಿ ಆರೋಪಿಯ ಮುಂದೆ ಲಂಚದ ಹಣವನ್ನು ಇಟ್ಟಿದ್ದರು. ಆಗ ಆರೋಪಿ ಚಾ.ಸಾ.1 ಇವರಿಗೆ ಅವರ ಚೆಕ್ಕು ರೆಡಿ ಇದೆ ಅದನ್ನು ಕೈಯಲ್ಲಿ ಕೊಡುವುದಿಲ್ಲ ಬ್ಯಾಂಕಿಗೆ ಪಾತಿಯಾಗುತ್ತದೆ ಎಂದು ಹೇಳಿದ್ದರು. ಆ ದಿನ ಚಾ.ಸಾ.1 ಇವರೊಂದಿಗೆ ಮಾತನಾಡಿದ ವ್ಯಕ್ತಿಯನ್ನು ನೋಡಿ ಗುರುತಿಸಬಲ್ಲೆ. ಈ ದಿನ ನ್ಯಾಯಾಲಯದಲ್ಲಿರುವ 1 ನೇ ಆರೋಪಿಯನ್ನು ನೋಡಿ ಗುರುತಿಸಿದ್ದೇನೆ. ನಾವು ಆರೋಪಿಯ ಕೋಣೆಯಿಂದ ಹೊರಬಂದು, ಚಾ.ಸಾ.1 ಪೊಲೀಸರಿಗೆ ಸೂಚನೆಯನ್ನು ಕೊಟ್ಟಿದ್ದರು.

6) ಆಗ ನಾನು, ಚಾ.ಸಾ.1, 5, 20 ಮತ್ತು ಸಿಬ್ಬಂದಿಯವರೆಲ್ಲ ಸೇರಿ ಆರೋಪಿಯ ಕೋಣೆಗೆ ಹೋಗಿದ್ದೇವು. ಆಗ ಚಾ.ಸಾ.20 ತಮ್ಮ ಗುರುತನ್ನು

ಹೇಳಿಕೊಂಡು ಮಾಡಬೇಕಾದ ತನಿಖೆಗೆ ಸಹಕರಿಸಬೇಕೆಂದು ಹೇಳಿದ್ದರು. ಆಗ ಚಾ.ಸಾ.20 ಲಂಚದ ಹಣದ ಬಗ್ಗೆ ಕೇಳಿದ್ದರು. ಆಗ 1 ನೇ ಆರೋಪಿ ಆ ಹಣವನ್ನು 2 ನೇ ಆರೋಪಿಯ ಬಳಿ ಕೊಟ್ಟಿರುವುದಾಗಿ ಹೇಳಿದ್ದರು. ಚಾ.ಸಾ.20 ಈ ಎರಡನೇ ಆರೋಪಿತನನ್ನು ಅಲ್ಲಿಗೆ ಕಳುಹಿಸಿದ್ದರು. ಆತ ಬಂದು ಆ ಹಣವನ್ನು ಟ್ರಾನ್ಸಪೋರ್ಟ್ ಸೆಕ್ಷನಿನ ಮರದ ಕಪಾಟಿನಲ್ಲಿ ಇಟ್ಟಿರುವುದಾಗಿ ಹೇಳಿದ್ದರು. ಆ ಸಮಯದಲ್ಲಿ ಎ.ಸಿ.ಬಿ ಪೊಲೀಸ್ ಸಿಬ್ಬಂದಿಗಳು ಈ ಮೊದಲು ಠಾಣೆಯಲ್ಲಿ ತಯಾರಿಸಿದಂತೆ ಸೋಡಿಯಂ ಕಾರ್ಬೋನೇಟ್ ದ್ರಾವಣವನ್ನು ತಯಾರಿಸಿದ್ದರು.ಅದು ಬಣ್ಣ ರಹಿತವಾಗಿತ್ತು. ಅದರ ಸ್ವಲ್ಪ ಭಾಗವನ್ನು ಮಾದರಿಯಾಗಿ ತೆಗೆದು ಗಾಜಿನ ಸೀಸೆಯಲ್ಲಿ ಹಾಕಿ ಸೀಲು ಮಾಡಿ ಸಂಗ್ರಹಿಸಿದ್ದರು. ಅದಕ್ಕಾಗಿ ನನ್ನ ಬಳಿಯಲ್ಲಿದ್ದ ಸೀಲ್ ನ್ನು ಪಡೆದು ಹಾಕಿ ಲೇಬಲ್ ನ್ನು ಅಂಟಿಸಿದ್ದರು. ಅದಕ್ಕೆ ನಮ್ಮ ಸಹಿ ಇತ್ತು. ಆ ಸೀಸೆಯನ್ನು ಈಗಾಗಲೇ ಎಮ್. ಎ. 4 ಎಂದು ಗುರುತಿಸಿದ್ದೇವೆ.

7)ಉಳಿದ ದ್ರಾವಣದಲ್ಲಿ ಎರಡು ಭಾಗ ಮಾಡಿ, ಒಂದು ಬಟ್ಟಲಿನಲ್ಲಿ ಆರೋಪಿಯ ಬಲಗೈಯ ಬೆರಳನ್ನು, ಇನ್ನೊಂದು ಬಟ್ಟಲಿನಲ್ಲಿ ಎಡಗೈ ಬೆರಳನ್ನು ತೊಳೆದಿದ್ದರು. ಆಗ ದ್ರಾವಣದ ಬಣ್ಣ ಗುಲಾಬಿ ಬಣ್ಣಕೆ ತಿರುಗಿತ್ತು. ಆ ದ್ರಾವಣವನ್ನು ಸೀಸೆಯಲ್ಲಿ ಹಾಕಿ ಸಂಗ್ರಹಿಸಿ ಸೀಲು ಮಾಡಿ, ನನ್ನ ಚಾ.ಸಾ.1, 5 ಇವರ ಸಹಿಯಿದ್ದ ಲೇಬಲ್ ಗಳನ್ನು ಅಂಟಿಸಿದ್ದರು. ಆ ದಿನ ಮಾದರಿಗಳನ್ನು ತೆಗೆದು ಸಂಗ್ರಹಿಸಿದ್ದ ಸೀಸೆಗಳನ್ನು ಈಗಾಗಲೇ ಎಮ್. ಒ. 5 ಮತ್ತು 6 ಎಂದು ಗುರುತಿಸಿದೆ. ಅದೇ ರೀತಿ 2 ನೇ ಆರೋಪಿಯ ಕೈ ಬೆರಳುಗಳನ್ನು ಸಹ ದ್ರಾವಣದಲ್ಲಿ ತೊಳೆದಿದ್ದರು. ಅದಕ್ಕಾಗಿ, ಈ ಮೇಲೆ ಹೇಳಿದಂತೆ ದ್ರಾವಣವನ್ನು ತಯಾರಿಸಿ ಮಾದರಿಗಳನ್ನು ತೆಗೆದು ನಂತರ ಕೈಗಳನ್ನು ಅದ್ದಿಸಿದ್ದರು. ಆಗ ತೆಗೆದ ದ್ರಾವಣದ ಮಾದರಿ ಎಮ್. ಒ. 7 ಆಗಿದ್ದು, 2 ನೇ ಆರೋಪಿ ಕೈತೊಳೆದ ದ್ರಾವಣದ ಸಂಗ್ರಹ ಎಮ್. ಒ. 8 ಮತ್ತು 9 ಆಗಿದೆ. ಸದ್ರಿ ದ್ರಾವಣದ ಬಣ್ಣ ತಿಳಿ ಗುಲಾಬಿಯಾಗಿತ್ತು. ಆ ದಿನ ಕೈತೊಳೆದ 2 ನೇ ಆರೋಪಿತನನ್ನು ಈ ದಿನ ನ್ಯಾಯಾಲಯದಲ್ಲಿ ನೋಡಿ ಗುರುತಿಸಿದ್ದೇನೆ.

8)ನಂತರ ತನಿಖಾಧಿಕಾರಿ 2 ನೇ ಆರೋಪಿಯ ಬಳಿ ಹಣವನ್ನು ಇಟ್ಟ ಜಾಗೆಯ ಬಗ್ಗೆ ಕೇಳಿದ್ದರು. ಆ ಜಾಗೆಗೆ ಕರೆದುಕೊಂಡು ಹೋಗಲು ಚಾ.ಸಾ.20 ಹೇಳಿದ್ದರಿಂದ 2 ನೇ ಆರೋಪಿಯೊಂದಿಗೆ ಚಾ.ಸಾ.20, ನಾನು, 5 ಇತರ ಸಿಬ್ಬಂದಿಗಳು

ಹೋಗಿದ್ದೇವು. ಆ ಕೋಣೆ 1 ನೇ ಆರೋಪಿತನ ಎದುರಿನ ಕೋಣೆಯಾಗಿತ್ತು. ಅಲ್ಲಿ ಇದ್ದ ಮರದ ಕಪಾಟಿನಲ್ಲಿ ಇದ್ದ ಒಂದು ಕಡತದಲ್ಲಿನ ಬಿಳಿ ಪೇಪರಲ್ಲಿದ್ದ ಹಣವನ್ನು 2 ನೇ ಆರೋಪಿ ತೆಗೆದುಕೊಟ್ಟಿದ್ದರು. ಆಗ ಚಾ.ಸಾ.20 ಆ ಹಣವನ್ನು ತೆಗೆದುಕೊಂಡು ಈ ಮೊದಲು ಬರೆದಿದ್ದ ನೋಟಿನ ಸಂಖ್ಯೆಗಳಿಗೆ ತಾಳೆ ಮಾಡಲು ಹೇಳಿದ್ದರು. ಅದಕ್ಕಾಗಿ ನಾನು ನಂಬರಗಳನ್ನು ಹೇಳಿದ್ದೆ. ಚಾ.ಸಾ.5 ನಿ.ಪಿ.7 ರೊಂದಿಗೆ ನೋಡಿಕೊಂಡಿದ್ದರು. ಅದು ತಾಳೆಯಾಗಿತ್ತು. ಅದೇ ಕಪಾಟಿನಲ್ಲಿ ಕಡತಗಳ ಮಧ್ಯೆ ಇದ್ದ ಬೇರೆ ಹಣವನ್ನು ಚಾ.ಸಾ.20 ತೆಗೆದು ತೋರಿಸಲು ಹೇಳಿದ್ದರು. ಅದರಂತೆ, ನೋಡಿದಾಗ ಅದರಲ್ಲಿ 30,670/- ರೂಪಾಯಿಗಳ ಹಣವಿತ್ತು. ಅದಕ್ಕಾಗಿ ಹಣವನ್ನು ಜಪ್ತು ಮಾಡಿಕೊಂಡು ಚೀಲದಲ್ಲಿ ಹಾಕಿ ನಮ್ಮ ಸಹಿ ಪಡೆದುಕೊಂಡಿದ್ದರು. ಆ ದಿನ ಚಾ.ಸಾ.1 ಕೊಟ್ಟಿದ್ದ ಹಣವನ್ನು ನಾನು ನೋಡಿ ಗುರುತಿಸಬಲ್ಲೆ. ಈಗ ನೋಡಿದ ಆ ಹಣವನ್ನು ಈಗಾಗಲೇ ಎಮ್.ಒ.10 ಎಂದು ಗುರುತಿಸಿದೆ. ಈ ಎಲ್ಲಾ ಪ್ರಕ್ರಿಯೆಗಳು ನಡೆಯುತ್ತಿದ್ದಾಗ ಪೊಲೀಸರು ಪೋಟೋ ಮತ್ತು ವಿಡಿಯೋ ಮಾಡುತ್ತಿದ್ದರು ಮತ್ತು ಅದನ್ನು ಟೈಪ್ ಮಾಡಿಕೊಂಡು ದಾಖಲಿಸಿದ್ದರು.

9) ಅಲ್ಲಿಂದ 1 ನೇ ಆರೋಪಿಯ ಕೋಣೆಗೆ ಹೋಗಿದ್ದೇವು. ಅಲ್ಲಿಗೆ ಚಾ.ಸಾ.3 ಇವರನ್ನು ಚಾ.ಸಾ.20 ಕರೆಸಿದ್ದರು ಮತ್ತು ಚಾ.ಸಾ.3 ಇವರಿಗೆ ಚಾ.ಸಾ.20 ಅವರ ಬಳಿಯಲ್ಲಿದ್ದ ಡಿ.ವಿ.ಡಿ ಮತ್ತು ವೈಸ್ ರೆಕಾರ್ಡರಗಳಲ್ಲಿದ್ದ ಸಂಭಾಷಣೆಯನ್ನು ಕೇಳಿಸಿದ್ದರು. ಚಾ.ಸಾ.3 ಅವುಗಳನ್ನು ಕೇಳಿ ಅವುಗಳಲ್ಲಿದ್ದ 1 ಮತ್ತು 2 ನೇ ಆರೋಪಿತರ ಧ್ವನಿಗಳನ್ನು ಗುರುತಿಸಿದ್ದರು. ನಂತರ, ವೈಸ್ ರೆಕಾರ್ಡ್‌ರನಲ್ಲಿದ್ದ ಚಾ.ಸಾ.20 ಲ್ಯಾಪ್ ಟಾಪ ಮೂಲಕ ಪೆನ್ ಡ್ರೈವ್ ನಲ್ಲಿ ಸಂಗ್ರಹಿಸಿದ್ದರು. ಚಾ.ಸಾ.20 ಇವರು ಆಗ ಅಲ್ಲಿ 1 ಮತ್ತು 2 ನೇ ಆರೋಪಿತರಿಂದ ಸಮಜಾಯಿಷಯನ್ನು ಕೇಳಿ ಪಡೆದಿದ್ದರು. ಆ ಸಮಜಾಯಿಷಿಯನ್ನು ನೋಡಿದ್ದ ಚಾ.ಸಾ.1 ಅದನ್ನು ಒಪ್ಪಿಕೊಂಡಿಲ್ಲ. ಅದು ಸುಳ್ಳು ಎಂದಿದ್ದರು. ಚಾ.ಸಾ.3 ಇವರಿಂದ ಚಾ.ಸಾ.20 ಇವರು ಚಾ.ಸಾ.1 ಇವರಿಗೆ ಸಂಬಧಪಟ್ಟ ಕಡತದ ದಾಖಲೆಗಳನ್ನು ಪಡೆದಿದ್ದರು. ಆ ದಾಖಲೆಗಳನ್ನು ನಾನು ನೋಡಿದರೆ ಗುರುತಿಸಬಲ್ಲೆ. ಈಗ ನೋಡಿದ ದಾಖಲೆಗಳನ್ನು ಪಡೆದು ಜಪ್ತಿ ಮಾಡಿದ್ದು, ಈಗಾಗಲೇ ಅವುಗಳಲ್ಲಿಯ ಒಂದು ದಾಖಲೆಯನ್ನು ನಿ.ಪಿ 3 ಎಂದು

ಗುರುತಿಸಲಾಗಿದೆ. ಇನ್ನೊಂದು ದಾಖಲೆಯನ್ನು ಈಗ ನೋಡಿ ನಿ.ಪಿ.8 (4 ಹಾಳೆಗಳ ದಾಖಲೆ) ಎಂದು ಗುರುತಿಸಲಾಯಿತು.

10)ಆ ದಿನ 1ನೇ ಆರೋಪಿಯ ಕೋಣೆಯಲ್ಲಿದ್ದ ಸಿ.ಸಿ.ಟಿ.ವಿ ದೃಶ್ಯಾವಳಿಗಳನ್ನು ಚಾ.ಸಾ.20 ತೆಗೆಸಿ ನೋಡಿದ್ದರು. ಅದರಲ್ಲಿ 1ನೇ ಆರೋಪಿ ಹಣವನ್ನು ಪಡದುಕೊಳ್ಳುತ್ತಿದ್ದ ಬಗ್ಗೆ ದಾಖಲಾತಿ ಇತ್ತು. ಅದನ್ನು ಚಾ.ಸಾ.20 ಲ್ಯಾಪ್ ಟಾಪ ಮೂಲಕ ಪೆನ್ ಡ್ರೈವ್ ಗೆ ದಾಖಲಿಸಿಕೊಂಡಿದ್ದರು. ಆ ದಿನ ಅಲ್ಲಿಗೆ ಪೆನ್ ಡ್ರೈವ್ ನ್ನು ಕವರಿಗೆ ಹಾಕಿ ಸೀಲು ಮಾಡಿ ಜಪ್ತು ಮಾಡಿ ನಮ್ಮ ಸಹಿಗಳ ಚೀಟಿ ಅಂಟಿಸಿದ್ದರು. ಆ ಸಮಯದಲ್ಲಿಯ ಆರೋಪಿಯ ಕಚೇರಿಯ ಕ್ಯಾಮೆರಾ ಮತ್ತು ಡಿವಿಆರ್ ಗಳನ್ನು ಸಹ ಜಪ್ತು ಮಾಡಿದ್ದರು. ಅವುಗಳನ್ನು ಕೂಡ ನಮ್ಮ ಸಹಿಯ ಚೀಟಿಗಳನ್ನು ಅಂಟಿಸಿ ಇಟ್ಟಿದ್ದರು. ಆದಿನ ಜಪ್ತಾದ ಪೆನ್ ಡ್ರೈವ್ ನ್ನು ಎಮ್. ಒ. 11 ಮತ್ತು ಡಿ.ವಿ.ಆರ್ ನ್ನು ಎಮ್. ಒ. 12 ಎಂದು ಗುರುತಿಸಲಾಯಿತು.

ಸಮಯ 2.00 ಗಂಟೆ ಆಗಿರುವುದರಿಂದ ಮುಂದಿನ ಮುಖ್ಯ ವಿಚಾರಣೆಯನ್ನು ಮಧ್ಯಾಹ್ನಕ್ಕೆ ಮುಂದೂಡಲಾಯಿತು.

ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನವನ್ನು ಭೋಧಿಸಲಾಯಿತು.

**ಮುಂದುವರಿದ ಮುಖ್ಯ ವಿಚಾರಣೆಃ ವಿಶೇಷ ಸಾರ್ವಜನಿಕ ಅಭಿಯೋಜಕರಿಂದ**

11) ಚಾ.ಸಾ.20 ಇವರು ಚಾ.ಸಾ.1 ಇವರಿಗೆ ಹಣ ಇಟ್ಟ ಜಾಗೆಯನ್ನು ಕೇಳಿದ್ದರು. ಆಗ ಅವರು ತೋರಿಸಿದ ಮೇಜಿನ ಮೇಲಿನ ಜಾಗೆಯನ್ನು ಒಂದು ಅರಳಿನ ಉಂಡೆಯಿಂದ ಅದನ್ನು ಒರೆಸಿದ್ದರು. ಆ ಉಂಡೆಯನ್ನು ಒಂದು ಪ್ಲಾಸ್ಟಿಕ್ ಕವರಿನಲ್ಲಿ ಜಪ್ತಿ ಮಾಡಿದ್ದರು. ಸದ್ರಿ ಹತ್ತಿಯನ್ನು ನೋಡಿ ಗುರುತಿಸಬಲ್ಲೆ. ಈಗ ಎಫ್. ಎಸ್. ಎಲ್. ಸೀಲ ಇರುವ ಕವರನ್ನು ತೆಗೆದು ಅದರಲ್ಲಿರುವ ಪ್ಲಾಸ್ಟಿಕ್ ಕವರಿನಲ್ಲಿರುವ ಅರಳಿಯನ್ನು ನೋಡಿ ಸಾಕ್ಷಿದಾರರು ಗುರುತಿಸಿದ್ದರಿಂದ ಅದನ್ನು ಎಮ್. ಒ. 13 ಎಂದು ಗುರುತಿಸಲಾಯಿತು. ಅದಕ್ಕಾಗಿ ಅಲ್ಲಿ ಮಹಜರು ಸಹ ಬರೆದಿದ್ದರು. ಸದ್ರಿ ಮಹಜರು ನಿ.ಪಿ 4 ಆಗಿದ್ದು, ಅದರಲ್ಲಿಯ ಸಾಕ್ಷಿದಾರರ ಸಹಿಯನ್ನು ಸಾಕ್ಷಿದಾರರು ಗುರುತಿಸಿ ನಿ.ಪಿ 4 (ಬಿ) ಎಂದು ಗುರುತಿಸಲಾಯಿತು. ಆಗ ನಾನು ಚಾ.ಸಾ.3, 5 ಮತ್ತು 20 ಸಹ ಸಹಿ ಮಾಡಿದ್ದರು. ಆ ಸಮಯದಲ್ಲಿ ಫೋಟೋ ಮತ್ತು ವಿಡಿಯೋಗಳನ್ನು ಸಹ ತೆಗೆದಿದ್ದರು. ಆ ಫೋಟೋಗಳನ್ನು ನೋಡಿದರೆ

ಗುರುತಿಸುತ್ತೇನೆ. ಆಗ ತೆಗೆದ 30 ಪೋಟೋಗಳನ್ನು ನಿ.ಪಿ 30 ಎಂದು ಗುರುತಿಸಿದೆ. ಆರೋಪಿತರನ್ನು ದಸ್ತಗಿರಿ ಮಾಡಿದ್ದ ಪೊಲೀಸರು ಠಾಣೆಗೆ ಕರೆದುಕೊಂಡು ಹೋಗಿದ್ದರು. ಆ ದಿನ ಪಂಚನಾಮೆ ಬರೆಯುವಾಗ ಬಳಸಿದ್ದ 'V' ಅಕ್ಷರದ ಸೀಲನ್ನು ಬಳಸಿದ್ದರು ಅದನ್ನು ನಂತರ ನನ್ನ ಬಳಿ ಕೊಟ್ಟಿದ್ದರು. ಸದ್ರಿ ಸೀಲು ಈಗಲೂ ನನ್ನ ಬಳಿ ಇದ್ದು, ಈ ದಿನ ನಾನು ಅದನ್ನು ಹಾಜರುಪಡಿಸುತ್ತಿದ್ದೇನೆ. ಅದನ್ನು ನೋಡಿ ಎಮ್.ಒ 14 ಎಂದು ಗುರುತಿಸಲಾಯಿತು. ಎಮ್.ಒ. 14 ರ ಮಾದರಿ ಸೀಲನ್ನು ಈಗ ನೋಡಿ ಅದನ್ನು ನಿ.ಪಿ 9 ಎಂದು ಮತ್ತು ಎಮ್ ಒ 14 ನ್ನು ನಾನು ಪಡೆದಾಗ ಬರೆದುಕೊಟ್ಟಿದ್ದ ರಸೀದಿಯನ್ನು ನಿ.ಪಿ 10 ಎಂದು ಗುರುತಿಸಿದ್ದೇನೆ.

12) ನಂತರ ತಾರೀಕು 06.05.2019 ರಂದು ಪೊಲೀಸರು ನನ್ನನ್ನು ಮತ್ತು ಚಾ.ಸಾ.5 ರವರನ್ನು ಎಸಿಬಿ ಕಚೇರಿಗೆ ಕರೆಯಿಸಿದ್ದರು. ಆ ದಿನ ನಾವು ಅಲ್ಲಿಗೆ ಹೋಗಿ ಬರುತ್ತಿದ್ದಾಗ 12 ಗಂಟೆ ಸಮಯ. 3 ಗಂಟೆಯ ಸಮಯಕ್ಕೆ 1 ನೇ ಆರೋಪಿ ಬಂದಿದ್ದರು. ಆ ದಿನ 1 ನೇ ಆರೋಪಿಯ ವೈಸ್ ದಾಖಲಿಸಿಕೊಳ್ಳಲು ನಮ್ಮನ್ನು ಕರೆಸಿದ್ದರು. ಪ್ರಿ ಟ್ರ್ಯಾಪ್ ಮತ್ತು ಟ್ರ್ಯಾಪ್ ಸಮಯದ ಸಂಭಾಷಣೆಯ 1 ನೇ ಆರೋಪಿಯ ಮಾತುಗಳನ್ನು ಟೈಪ್ ಮಾಡಿ ಕೊಟ್ಟಿದ್ದರು. ಅದಕ್ಕೆ ನಾನು ಮತ್ತು ಚಾ.ಸಾ.5 ರವರು ಸಹಿ ಮಾಡಿದ್ದೇವು, ಸದ್ರಿ ದಾಖಲೆಯನ್ನು ನೋಡಿ ನಿ.ಪಿ 11 ಎಂದು, ಅದರಲ್ಲಿರುವ ನನ್ನ ಸಹಿಯನ್ನು ನಿ.ಪಿ 11(ಎ) ಎಂದು ಗುರುತಿಸಲಾಯಿತು. ಸದ್ರಿ ಸಂಭಾಷಣೆಯನ್ನು 1 ನೇ ಆರೋಪಿಗೆ ಕೊಟ್ಟು ಅವರಿಂದ 6 ಸಲ ಹೇಳಿಸಿ ಅದನ್ನು ಚಾ.ಸಾ.20 ವೈಸ್ ರೆಕಾರ್ಡರ ರನಲ್ಲಿ ದಾಖಲಿಸಿದ್ದರು. ಅದಕ್ಕಾಗಿ ಮಹಜರೊಂದನ್ನು ಬರೆದಿದ್ದರು. ಅದಕ್ಕೆ ನಾನು, ಚಾ.ಸಾ.5, 1 ನೇ ಆರೋಪಿ ಮತ್ತು ಚಾ.ಸಾ.20 ರ ಸಿಬ್ಬಂದಿಯವರು ಸಹ ಸಹಿ ಮಾಡಿದ್ದರು. ಆ ಮಹಜರುನ್ನು ಈಗ ನೋಡಿ ಅದನ್ನು ನಿ.ಪಿ 12 ಎಂದು, ಅದರಲ್ಲಿರುವ ಸಹಿಯನ್ನು ನಿ.ಪಿ 12(ಎ) ಎಂದು ಗುರುತಿಸಲಾಯಿತು. ಆಗ ತೆಗೆದಿದ್ದ ಪೋಟೋಗಳನ್ನು 4 ಪೋಟೋಗಳನ್ನು ಈಗ ನೋಡಿ ನಿ.ಪಿ 13 ಎಂದು ಗುರುತಿಸಲಾಯಿತು. ನಿ.ಪಿ 12 ರಡಿಯಲ್ಲಿ ವೈಸ್ ರೆಕಾರ್ಡ್ ನಲ್ಲಿ ದಾಖಲಿಸಿದ್ದ ಸಂಭಾಷಣೆಯನ್ನು ಲ್ಯಾಪ್ ಟಾಪ್ ಮೂಲಕ ಸಿಡಿಗೆ ವರ್ಗಾಯಿಸಿಕೊಂಡಿದ್ದರು. ಆ ಸಿ.ಡಿ.ಯನ್ನು ಜಪ್ತು ಮಾಡಿದ್ದರು. ನನಗೀಗ ತೋರಿಸಿದ ಕ್ರಮಸಂಖ್ಯೆ 21 ರ ಎಫ್ ಎಸ್ ಎಲ್ ಸೀಲ್ ಇರುವ ಲಕೋಟೆಯಿಂದ ತೆಗೆದ

ಸಿಡಿಯೊಂದನ್ನು ನೋಡಿ ಸಾಕ್ಷಿದಾರರು ಗುರುತಿಸಿದ್ದರಿಂದ ಅದನ್ನು ಎಮ್ ಒ 15 ಎಂದು ಗುರುತಿಸಲಾಯಿತು. ಅದನ್ನು ಜಪ್ತು ಮಾಡಲು ನನ್ನ ಬಳಿಯಲ್ಲಿದ್ದ ಸೀಲನ್ನು ಬಳಸಿದ್ದರು. ಆ ದಿನ ಬಳಸಿದ ಸೀಲ್ ಮಾದರಿಯನ್ನು ಈಗ ನೋಡಿ ಅದನ್ನು ನಿ.ಪಿ 14 ಎಂದು ಗುರುತಿಸಲಾಯಿತು. ಅದಕ್ಕಾಗಿ ನಾನು ಬರೆದುಕೊಟ್ಟಿದ್ದ ರಸೀದಿಯನ್ನು ನಿ.ಪಿ 15 ಎಂದು ಗುರುತಿಸಲಾಯಿತು.

13) ತಾರೀಕು 17.05.2019 ರಂದು ಪೊಲೀಸರು ನನ್ನನ್ನು ಮತ್ತು ಚಾ.ಸಾ.5 ರವರನ್ನು ಎಸಿಬಿ ಕಚೇರಿಗೆ ಕರೆಯಿಸಿದ್ದರು. ಆ ದಿನ ನಾವು ಅಲ್ಲಿಗೆ ಹೋಗಿ ಬರುತ್ತಿದ್ದಾಗ 10 ಗಂಟೆ ಸಮಯ. 10.30 ಗಂಟೆಯ ಸಮಯಕ್ಕೆ 2 ನೇ ಆರೋಪಿ ಬಂದಿದ್ದರು. ಆ ದಿನ 2 ನೇ ಆರೋಪಿಯ ವೈಸ್ ದಾಖಲಿಸಿಕೊಳ್ಳಲು ನಮ್ಮನ್ನು ಕರೆಸಿದ್ದರು. ಟ್ರ್ಯಾಪ್ ಸಮಯದ ಸಂಭಾಷಣೆಯಲ್ಲಿಯ 2 ನೇ ಆರೋಪಿಯ ಮಾತುಗಳನ್ನು ಚಾ.ಸಾ.20 ಟೈಪ್ ಮಾಡಿಸಿ ಕೊಟ್ಟಿದ್ದರು. ಅದಕ್ಕೆ ನಾನು ಮತ್ತು ಚಾ.ಸಾ.5 ರವರು ಸಹಿ ಮಾಡಿದ್ದೇವು. ಸದ್ರಿ ದಾಖಲೆಯನ್ನು ನೋಡಿ ನಿ.ಪಿ 16 ಎಂದು, ಅದರಲ್ಲಿರುವ ನನ್ನ ಸಹಿಯನ್ನು ನಿ.ಪಿ 16(ಎ) ಎಂದು ಗುರುತಿಸಲಾಯಿತು. ಸದ್ರಿ ಸಂಭಾಷಣೆಯನ್ನು 2 ನೇ ಆರೋಪಿಗೆ ಕೊಟ್ಟು ಅವರಿಂದ 6 ಸಲ ಹೇಳಿಸಿ ಅದನ್ನು ಚಾ.ಸಾ.20 ವೈಸ್ ರೆಕಾರ್ಡರನಲ್ಲಿ ದಾಖಲಿಸಿದ್ದರು. ಅದಕ್ಕಾಗಿ ಮಹಜರೊಂದನ್ನು ಬರೆದಿದ್ದರು. ಅದಕ್ಕೆ ನಾನು, ಚಾ.ಸಾ.5, 2 ನೇ ಆರೋಪಿ ಮತ್ತು ಚಾ.ಸಾ.20 ರ ಸಿಬ್ಬಂದಿಯವರು ಸಹ ಸಹಿ ಮಾಡಿದ್ದರು. ಆ ಮಹಜರುನ್ನು ಈಗ ನೋಡಿ ಅದನ್ನು ನಿ.ಪಿ 17 ಎಂದು, ಅದರಲ್ಲಿರುವ ಸಹಿಯನ್ನು ನಿ.ಪಿ 17(ಎ) ಎಂದು ಗುರುತಿಸಲಾಯಿತು. ಆಗ ತೆಗೆದಿದ್ದ ಪೋಟೋಗಳನ್ನು 4 ಪೋಟೋಗಳನ್ನು ಈಗ ನೋಡಿ ನಿ.ಪಿ 18 ಎಂದು ಗುರುತಿಸಲಾಯಿತು. ನಿ.ಪಿ 12 ರಡಿಯಲ್ಲಿ ವೈಸ್ ರೆಕಾರ್ಡ್ ನಲ್ಲಿ ದಾಖಲಿಸಿದ್ದ ಸಂಭಾಷಣೆಯನ್ನು ಲ್ಯಾಪ್ ಟಾಪ್ ಮೂಲಕ ಸಿಡಿಗೆ ವರ್ಗಾಯಿಸಿಕೊಂಡಿದ್ದರು. ಆ ಸಿ.ಡಿ.ಯನ್ನು ಜಪ್ತು ಮಾಡಿದ್ದರು. ನನಗೀಗ ತೋರಿಸಿದ ಕ್ರಮಸಂಖ್ಯೆ 22 ರ ಎಫ್.ಎಸ್.ಎಲ್. ಸೀಲ್ ಇರುವ ಲಕೋಟೆಯಿಂದ ತೆಗೆದ ಸಿಡಿಯೊಂದನ್ನು ನೋಡಿ ಸಾಕ್ಷಿದಾರರು ಗುರುತಿಸಿದ್ದರಿಂದ ಅದನ್ನು ಎಮ್. ಒ .16 ಎಂದು ಗುರುತಿಸಲಾಯಿತು.

14) ಅದನ್ನು ಜಪ್ತು ಮಾಡಲು ನನ್ನ ಬಳಿಯಲ್ಲಿದ್ದ ಸೀಲನ್ನು ಬಳಸಿದ್ದರು. ಅದೇ ದಿನ ತಾರೀಕು 16.03.2019 ರಂದು 1 ನೇ ಆರೋಪಿಯ ಕಚೇರಿಯಲ್ಲಿ ಜಪ್ತಾಗಿದ್ದ ಎಮ್.ಒ. 12 ರ ಡಿವಿಆರ್ ನ್ನು ಚಾ.ಸಾ.20 ಇವರ ಲ್ಯಾಪ್ ಟಾಪ್‌ಗೆ ಸಂಪರ್ಕಿಸಿಕೊಂಡು ತಾರೀಕು 15.03.2019 ಮತ್ತು 16.03.2019 ರ ಸಿ.ಸಿ ಟಿ ವಿ ಪೂಟೇಜ್‌ಗಳ ದೃಶ್ಯಾವಳಿಗಳನ್ನು ಲ್ಯಾಪ್ ಟಾಪ್ ಮೂಲಕ ಸಿಡಿಗೆ ವರ್ಗಾಯಿಸಿಕೊಂಡಿದ್ದರು. ಆ ಸಿಡಿಗಳನ್ನು ನೋಡಿದರೆ ಗುರುತಿಸಬಲ್ಲೆ. ಈಗ ತೋರಿಸಿದ ಕ್ರಮ ಸಂಖ್ಯೆ 23 ಮತ್ತು 24 ರ ಲಕೋಟೆಗಳ ಮೇಲೆ ನಮ್ಮ ಸಹಿಯ ಚೀಟಿಗಳಿರುವುದರಿಂದ ಗುರುತಿಸಿ ಅವುಗಳನ್ನು ತೆಗೆದು ನೋಡಿ ಗುರುತಿಸಿ ಎಮ್ .ಒ 17 ಮತ್ತು ಎಮ್. ಒ 18 ಎಂದು ಗುರುತಿಸಲಾಯಿತು. ಆದಿನ ಜಪ್ತಾದ ಮುದ್ದೆಮಾಲುಗಳಿಗೆ ನನ್ನ ಬಳಿ ಕೊಟ್ಟಿದ್ದ 'ವಿ' ಸೀಲನ್ನು ಬಳಸಿದ್ದರು. ಅದನ್ನು ಈಗ ನೋಡಿ ನಿ.ಪಿ 19 ಎಂದು, ಅದರಲ್ಲಿರುವ ನನ್ನ ಸಹಿಯನ್ನು ನಿ.ಪಿ 19(ಎ) ಎಂದು ಗುರುತಿಸಲಾಯಿತು.

15) ಆಗ ತೆಗೆದಿದ್ದ 6 ಪೋಟೊಗಳನ್ನು ಈಗ ನೋಡಿ ಅವುಗಳನ್ನು ನಿ.ಪಿ 20 ಎಂದು, ಆ ದಿನ ಬಳಸಿದ ಮೊಹರಿನ ಮಾದರಿಯನ್ನು ನಿ.ಪಿ 21 ಎಂದು ಗುರುತಿಸಲಾಯಿತು.

16)ತಾರೀಕು 20.06.2019 ರಂದು ಚಾ.ಸಾ.20 ಠಾಣೆಗೆ ಬರಲು ಹೇಳಿದ್ದರು. ಅಲ್ಲಿಗೆ ಹೋಗಿದ್ದೆನು. ಆ ದಿನ ನಿ.ಪಿ 4 ರ ಜಾಗೆಯ ನಕಾಶೆ ತಯಾರಿಸಲು ಚಾ.ಸಾ.11 ಇವರಿಗೆ ಕೇಳಿದ್ದರು. ಅವರು ಸಹ ಅಲ್ಲಿಗೆ ಬಂದಿದ್ದರು. ನಾವು ಪೊಲೀಸ ಸಿಬ್ಬಂದಿ ಮತ್ತು ಚಾ.ಸಾ.11 1 ನೇ ಆರೋಪಿಯ ಕಚೇರಿಗೆ ಹೋಗಿ, 1 ನೇ ಆರೋಪಿ ಕುಳಿತಕೊಳ್ಳುವ ಜಾಗೆಯ ನಕ್ಷೆಯನ್ನು ತೆಗೆದಿದ್ದರು. ಆ ಸಮಯದಲ್ಲಿ ಪೋಟೋವನ್ನು ಸಹ ತೆಗೆದಿದ್ದರು. ಆಗ ತೆಗದಿದ್ದ ನಕಾಶೆಯನ್ನು ಈಗ ನೋಡಿ ಅದನ್ನು ನಿ.ಪಿ 22 ಎಂದು, ಅದರಲ್ಲಿಯ ನನ್ನ ಸಹಿಯನ್ನು 22(ಎ) ಎಂದು ಸಾಕ್ಷಿ ಗುರುತಿಸಲಾಯಿತು. ಆಗ ತೆಗೆದಿದ್ದ 6 ಪೋಟೋಗಳನ್ನು ಅವುಗಳನ್ನು ಒಟ್ಟಾಗಿ ನಿ.ಪಿ 23 ಎಂದು ಗುರುತಿಸಲಾಯಿತು. ಈ ಎಲ್ಲಾ ತನಿಖೆಗೆ ಸಂಬಂಧಪಟ್ಟಂತೆ ಚಾ.ಸಾ.23 ನನ್ನ ಹೇಳಿಕೆಯನ್ನು ಪಡೆದಿದ್ದರು.

**(ಪಾಟಿ ಸವಾಲನ್ನು ವೇಳೆ ಕೋರಿದ್ದರಿಂದ ಮುಂದೂಡಲಾಗಿದೆ)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

(ಕೆ.ಎಸ್.ಗಂಗಣ್ಣವರ್)
ಸತ್ರ ನ್ಯಾಯಾಧೀಶರು/ವಿಶೇಷ ನ್ಯಾಯಾಧೀಶರು
ಉಡುಪಿ